# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ.

**ದಿನಾಂಕಃ 10 ನೇ ಡಿಸೆಂಬರ್ 2024**

**ಎಸ್.ಸಿ ನಂಃ 192/2024**

ಪಿರ್ಯಾದುದಾರರು ಃ ರಾಜ್ಯಪರ ಮುಳಬಾಗಿಲು ಗ್ರಾಮಾಂತರ ಪೊಲೀಸ್

ವಿರುದ್ಧ

ಆರೋಪಿ ಃ ವೆಂಕಟರಾಮ ಊ. ವೆಂಕಟರವಣ
ಬಿನ್. ಲೇಟ್ ಶ್ರೀರಾಮಪ್ಪ,
ವಯಸ್ಸು 37 ವರ್ಷ,
ವಾಸಃ ಸೀಗೇನಹಳ್ಳಿ ಗ್ರಾಮ, ಮುಳಬಾಗಿಲು ತಾಲ್ಲೂಕು.

## ದೋಷಾರೋಪಣೆ

ಶ್ರೀಮತಿ ಬಿ.ಎಸ್.ಜಯಶ್ರೀ, 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ ಆದ ನಾನು ಈ ಕೆಳಕಂಡಂತೆ ನಿಮ್ಮ ವಿರುದ್ಧ ದೋಷಾರೋಪಣೆಯನ್ನು ರಚಿಸಿರುತ್ತೇನೆ.

ದಿನಾಂಕ 04.05.2024 ರಂದು ರಾತ್ರಿ ಸುಮಾರು 9.30 ಗಂಟೆಯ ಸಮಯದಲ್ಲಿ ಸಾಕ್ಷಿ-2 ರವರು ಊಟ ಮಾಡಿಕೊಂಡು ವಾಕಿಂಗ್ ಮಾಡಿ ನಂತರ ಸಿ.ವೆಂಕಟರವಣಪ್ಪನ ಮನೆಯ ಮುಂದೆ ಕುಳಿತಿದ್ದು, ಸಾಕ್ಷಿ-3 ಮತ್ತು 4 ಅವರ ಬಳಿಗೆ ಬಂದಿದ್ದು ಅದೇ ಸಮಯಕ್ಕೆ ಆರೋಪಿಯಾದ ನೀವು ಕೈಯಲ್ಲಿ ಒಂದು ಚಾಕು ಹಿಡಿದುಕೊಂಡು ಬಂದು ಸಾಕ್ಷಿ-2 ರವರನ್ನು ಕುರಿತು ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತೀರಿ. ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ಆರೋಪಿಯಾದ ನೀವು ಮೇಲೆ ಹೇಳಿದ ದಿನಾಂಕ, ತಾರೀಖು ಸಮಯದಂದು ಆರೋಪಿಯಾದ ನೀವು, ನಿಮ್ಮ ಹೆಂಡತಿ ಹಾಗೂ ಸಾಕ್ಷಿ-1 ಹಾಗೂ 2 ರವರು ಒಂದೇ ಕಡೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದು, ಕೂಲಿ ಕೆಲಸದ ಜಾಗದಲ್ಲಿ ಸಾಕ್ಷಿ-2 ರವರು ನಿಮ್ಮ

ಹೆಂಡತಿಯಾದ ಸುನಂದಮ್ಮನವರನ್ನು ಸಲುಗೆಯಿಂದ ಮಾತನಾಡಿಸುತ್ತಿದ್ದು ಈ ಸಂಬಂಧ ನೀವುಗಳು ಸಾಕ್ಷಿ-2 ರವರ ಮೇಲೆ ದ್ವೇಷ ಇಟ್ಟುಕೊಂಡಿದ್ದು, ಸಾಕ್ಷಿ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಆತನ ಹೊಟ್ಟೆಗೆ ಚಾಕುವಿನಿಂದ ಬಲವಾಗಿ ತಿವಿದು ತೀವ್ರ ಸ್ವರೂಪದ ರಕ್ತಗಾಯಪಡಿಸಿದ್ದು ಸಾಕ್ಷಿ-2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುವುದರಿಂದ ಭಾರತೀಯ ದಂಡ ಸಂಹಿತೆ ಕಲಂ 307 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ಕೊನೆಯದಾಗಿ ಆರೋಪಿಯಾದ ನೀವು ಮೇಲೆ ಹೇಳಿದ ದಿನಾಂಕ, ತಾರೀಖು ಸಮಯದಂದು ಸಾಕ್ಷಿ-2 ರವರನ್ನು ಚಾಕುವಿನಿಂದ ಕತ್ತಿನ ಬಳಿ ಹಾಗೂ ಕೈಗಳಿಗೆ ಹಲ್ಲೆ ಮಾಡಿ ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 326 ರ ಅಡಿಯಲ್ಲಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುತ್ತೀರೆಂದು ಆರೋಪಿಸಿರುತ್ತೇನೆ.

ಈ ಮೇಲಿನ ಆರೋಪಗಳಿಗೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸಿರುತ್ತೇನೆ.

ಸಹಿ/-

**(ಬಿ.ಎಸ್. ಜಯಶ್ರೀ )**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಕೋಲಾರ.**